ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಬುಧವಾರ, ದಿನಾಂಕ : 11 ನೇ ಮಾರ್ಚ್, 2020

ಹುಬ್ಬಳ್ಳಿ-ಧಾರವಾಡ ಬೈಪಾಸ್ ರಸ್ತೆಯಲ್ಲಿ ನಡೆಯುವ ಅಪಘಾತಗಳ ಬಗ್ಗೆ

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ)-

95 (868) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 4ರಲ್ಲಿ ಹುಬ್ಬಳ್ಳಿಯ ಗಬ್ಬೂರು ಕ್ರಾಸ್‌ನಿಂದ ಧಾರವಾಡ ನರೇಂದ್ರ ಕ್ರಾಸ್‌ವರೆಗೆ ಬೈಪಾಸ್ ರಸ್ತೆಯನ್ನು ಎಂದು ಮಂಜೂರು ಮಾಡಲಾಯಿತು ; (ವರ್ಷ ಮತ್ತು ದಿನಾಂಕ ನೀಡುವುದು)

(ಆ) ಸದರಿ ರಸ್ತೆಯ ಗುತ್ತಿಗೆಯನ್ನು ಯಾರಿಗೆ ನೀಡಲಾಯಿತು ; ಇದನ್ನು ಮುಗಿಸಲು ನೀಡಲಾದ ಅವಧಿ ಎಷ್ಟು ; (ತಿಂಗಳು/ವರ್ಷಗಳು ಗುತ್ತಿಗೆದಾರರ ವಿವರ ನೀಡುವುದು)

(ಇ) ಸದರಿ ರಸ್ತೆಯಲ್ಲಿ ಟೋಲ್ ಮೂಲಕ ಹಣ ಸಂಗ್ರಹ ಮಾಡಲಾಗುತ್ತಿದ್ದು, ಎಷ್ಟು ತಿಂಗಳು/ವರ್ಷಗಳವರೆಗೆ ಇರುತ್ತದೆ ; ಈಗಾಗಲೇ ಸಂಗ್ರಹಿಸಲಾದ ಹಣ ಎಷ್ಟು ;

(ಈ) ಸದರಿ ರಸ್ತೆಯು ಕೇವಲ ಸಿಂಗಲ್ ಲೈನ್‌ದಾಗಿದ್ದು, ಪ್ರತಿ ದಿನ ಅಪಘಾತಗಳು ಸಂಭವಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ, ಇದನ್ನು ನಾಲ್ಕು/ಆರು ಲೈನುಗಳ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಊ) ಈ ರಸ್ತೆಯಲ್ಲಿ ಸಂಚರಿಸುವ ಅಮಾಯಕರ ಸಾರ್ವಜನಿಕರ ಸಾವು-ನೋವಿಗೆ ಸರ್ಕಾರ ಯಾವ ರೀತಿ ಸ್ಪಂದಿಸುತ್ತದೆ ?